[ Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KUSHTAGI**

**Criminal Case No. 241/2018**

ಪಿ.ಡಬ್ಲ್ಯು : 1 ಸಿ.ಡಬ್ಲ್ಯು : 1

ಸಾಕ್ಷಿದಾರರ ಹೆಸರು : ಶಿವಬಸಮ್ಮ
ಗಂಡನ ಹೆಸರು : ಅಮರೇಗೌಡ ಹೊಸಗೌಡ್ರ
ಪ್ರಾಯ : 45 ವರ್ಷ
ಉದ್ಯೋಗ : ಮನೆಗೆಲಸ
ವಾಸ : ಗಜೇಂದ್ರಗಡ

ದಿನಾಂಕ 1.08.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಚಾಸಾ-4 ನನ್ನ ನಾದಿನಿ. ಚಾಸಾ-5 ನಮ್ಮ ಕಾರ ಚಾಲಕ. ಚಾಸಾ-6 ನನ್ನ ತಮ್ಮ. ಚಾಸಾ-2 ಮತ್ತು 3 ರವರ ಪರಿಚಯವಿದೆ. ಆರೋಪಿ ನನ್ನ ಗಂಡ.

ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆ ನನ್ನ ಗಂಡ ನನ್ನ ಮೇಲೆ ಹಲ್ಲೆ ಮಾಡಿದ ಕುರಿತು ನೀಡಿದ ಪಿರ್ಯಾದು. ಸದರಿ ಪಿರ್ಯಾದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿನಾಂಕಃ8/05/1995 ರಂದು ನನ್ನನ್ನು ಆರೋಪಿಗೆ ಗಜೇಂದ್ರಗಡದ ಜಗದಂಭಾ ಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿಕೊಡಲಾಗಿರುತ್ತದೆ. ಸದರಿ ಮದುವೆಯಿಂದ ಒಂದು ಗಂಡು ಮತ್ತು ಒಂದು ಹೆಣ್ಣು ಮಗು ಜನಿಸಿರುತ್ತದೆ. ಸದರಿ ಎರಡು ಮಕ್ಕಳು ಜನಿಸಿದ ನಂತರ ಆರೋಪಿಯು ನನಗೆ ವಿನಾಕಾರಣ ಹೊಡೆಯುವುದು ಮತ್ತು ತವರುಮನೆಯಿಂದ ವರದಕ್ಷಿಣೆ ತರುವಂತೆ ಕಿರುಕುಳ ನೀಡಿರುತ್ತಾರೆ. ಆ ರೀತಿ ಆರೋಪಿಯು ಕಿರುಕುಳ ನೀಡುತ್ತಿದ್ದರು ಸಂಸಾರ ಒಂದು ದಿನ ಸರಿಹೋಗಬಹುದು ಎನ್ನುವ ಆಕಾಂಕ್ಷೆಯಿಂದ ಆರೋಪಿಯೊಂದಿಗೆ ಜೀವನ ನಡೆಸಿಕೊಂಡು ಬಂದಿದ್ದೆ.

2. ದಿನಾಂಕಃ26/6/2017 ರಂದು ನಾನು ನನ್ನ ತಮ್ಮನಾದ ಮಹಾಂತೇಶಗೌಡರವರ ಕಾರ ನೊಂದಣಿ ಸಂಖ್ಯೆಃಕೆಎಃ26/ಎಮ್ಃ2883 ರಲ್ಲಿ ಚಾಸಾ-4 ರವರೊಂದಿಗೆ ಗಜೇಂದ್ರಗಡದಿಂದ

ಹುಚ್ಚನೂರಿಗೆ ಹೋಗಿದ್ದೆವು. ಸದರಿ ದಿನ ನಮ್ಮ ಕಾರನ್ನು ಚಾಸಾ-5 ರವರು ಚಲಾಯಿಸುತ್ತಿದ್ದರು. ಬೆಳಗ್ಗೆ 11.30 ಗಂಟೆಗೆ ಹುಚ್ಚನೂರು ತಲುಪಿದ್ದೇವು. ನಂತರ ನಾನು ನನ್ನ ಮನೆಯ ಬೀಗವನ್ನು ತೆಗೆಯುತ್ತಿದ್ದಾಗ ಆರೋಪಿಯು ನನ್ನ ಹಿಂದಿನಿಂದ ಬಂದು ನನ್ನ ಕುತ್ತಿಗೆಯನ್ನು ಹಿಡಿದು ಹಿಚುಕಿರುತ್ತಾನೆ. ನಂತರ ಚಾಸಾ-4 ರವರು ಬಂದು ಬಿಡಿಸಿರುತ್ತಾರೆ. ಹಾಗೆ ಬಿಡಿಸಿದ ನಂತರ ನಾನು ನಾಲ್ಕು ಹೆಜ್ಜೆ ಮುಂದೆ ಹೋದಾಗ ಆರೋಪಿಯು ಮನೆಯ ಒಳಗೆ ಹೋಗಿ ಒಂದು ಕತ್ತಿಯನ್ನು ತಂದು ಕತ್ತಿಯಿಂದ ನನ್ನ ತಲೆಗೆ ಹೊಡೆದಿರುತ್ತಾನೆ. ಹಾಗೆ ಕತ್ತಿಯಿಂದ ಹೊಡೆದ ಪರಿಣಾಮ ನನ್ನ ತಲೆಗೆ ಮತ್ತು ನನ್ನ ಎಡಕೈ ಹಸ್ತಕ್ಕೆ ರಕ್ತಗಾಯಗಳು ಆಗಿದ್ದವು. ನಂತರ ನಾನು ನಡೆದ ಘಟನೆಯ ವಿಚಾರವನ್ನು ಚಾಸಾ-6 ರವರಿಗೆ ತಿಳಿಸಿ ಅವರೊಂದಿಗೆ ಚಿಕಿತ್ಸೆ ಕುರಿತು ಕುಷ್ಟಗಿಯ ಸರಕಾರಿ ಆಸ್ಪತ್ರೆಗೆ ಬಂದು ದಾಖಲಾಗಿರುತ್ತೆನೆ. ನಂತರ ಸದರಿ ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನಿಪಿ-1 ನ್ನು ನಾನೆ ಹೇಳಿದಂತೆ ನನ್ನ ತಮ್ಮನಾದ ಚಾಸಾ-6 ರವರು ಬರೆದಿರುತ್ತಾರೆ. ದಿನಾಂಕಃ27/6/2017 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಆರೋಪಿಯು ನನಗೆ ಬೋಸುಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು ನೀನು ಈ ಸಲ ಉಳಿದುಕೊಂಡಿದ್ದಿಯಾ ಇನ್ನೊಂದು ಬಾರಿ ಸಿಗು ನೀನ್ನನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಬೆದರಿಕೆ ಹಾಕಿದ್ದರು. ಸದರಿ ದಿನ ಆರೋಪಿಯು ನನಗೆ ಹಲ್ಲೆ ಮಾಡಲು ಬಳಿಸಿದ ಕತ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಕತ್ತಿಯಾಗಿರುತ್ತದೆ. ಸದರಿ ಕತ್ತಿಯನ್ನು ಮು.ಮಾ.1 ಎಂದು ಗುರುತಿಸಲಾಯಿತು. ನನಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಜೀವಬೆದರಿಕೆ ಹಾಕಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೆನೆ. ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವ ಕುರಿತು ಯಾವುದೆ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

<u>**ಪಾಟೀ ಸವಾಲು**</u> ಃ ಆರೋಪಿ ಪರ ಃ ಶ್ರೀಮತಿ ಎಸ್ ಹೆಚ್ ಡಿ  ವಕೀಲರಿಂದ ಃ

1. ನನ್ನ ಮದುವೆಯು ಆರೋಪಿಯೊಂದಿಗೆ ಜರುಗಿ 24 ವರ್ಷಗಳಾಗಿರುತ್ತವೆ. ನಾನು ಹುಚ್ಚನೂರಿನಲ್ಲಿ ಆರೋಪಿಯೊಂದಿಗೆ 20 ವರ್ಷಗಳವರೆಗೆ ಜೀವನ ನಡೆಸಿರುತ್ತೇನೆ. ಆರೋಪಿಯು ನನ್ನೊಂದಿಗೆ ಯಾವಾಗಲೂ ಜಗಳ ಮಾಡುತ್ತಿದ್ದರು ಎನ್ನುವ ವಿಚಾರವನ್ನು

ಹಿರಿಯರಿಗೆ ತಿಳಿಸಿರುತ್ತೇನೆ. ಸಾಕ್ಷಿ ಮುಂದುವರೆದು ಆ ರೀತಿ ತಿಳಿಸಿದಾಗ ಹೊಂದಿಕೊಂಡು ಜೀವನ ನಡೆಸುವಂತೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಯ ನಡುವೆ ಆಸ್ತಿ ವಿಭಾಗದ ಕುರಿತು ತಕರಾರು ಇತ್ತು ಎಂದರೆ ಸರಿಯಲ್ಲ. ನನ್ನ ಮಗಳ ಮೂಲಕ ಕುಷ್ಟಗಿಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪಾಲು ಕೇಳಿ ದಾವೆ ದಾಖಲಿಸಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಹಲ್ಲೆ ಮಾಡಿದ ನಂತರ ಆರೋಪಿಯು ಯಾವುದೆ ಜೀವನಾಂಶವನ್ನು ನೀಡಿರುವುದಿಲ್ಲ ಮತ್ತು 2ನೇ ಮದುವೆಯಾದ ಮೇರೆಗೆ ದಾವೆಯನ್ನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಗಜೇಂದ್ರಗಡ ನ್ಯಾಯಾಲಯದಲ್ಲಿ ಆರೋಪಿಯಿಂದ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಚಾಸಾ-4ರವರು ಪಾಲುಕೇಳಿ ಆರೋಪಿಯ ವಿರುದ್ದ ದಾವೆ ದಾಖಲಿಸಿದ್ದರು ಎಂದರೆ ಸರಿ. ಸದರಿ ಚಾಸಾ-4 ರವರು ದಾಖಲಿಸಿದ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ನಾನು ಮತ್ತು ಚಾಸಾ-4 ರವರು ಸೇರಿಕೊಂಡು ಆರೋಪಿಯ ಸರಕಾರಿ ಉದ್ಯೋಗಕ್ಕೆ ಮತ್ತು ಆತನಿಗೆ ಕಿರುಕುಳ ನೀಡುವ ಸಲುವಾಗಿ ಪ್ರಸ್ತುತ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೆವೆ ಎಂದರೆ ಸರಿಯಲ್ಲ.

2. ಸದರಿ ದಿನ ನಾನು ಹುಚ್ಚನೂರಿಗೆ ಹೋಗಿ ಮನೆಯ ಬಾಗಿಲನ್ನು ತೆಗೆಯುತ್ತಿದ್ದೆ ಎಂದು ಹೇಳುವ ಸಮಯದಲ್ಲಿ ಬೀಗದ ಕೀ ಯಾರ ಬಳಿ ಇತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ಬಳಿ ಒಂದು ಕೀ ಮತ್ತು ಆರೋಪಿಯ ಬಳಿ ಒಂದು ಕೀ ಇತ್ತು ಎಂದು ನುಡಿಯುತ್ತಾರೆ. ನಾನು ಹೋದ ಕೂಡಲೆ ಆರೋಪಿ ಬಂದಿರುತ್ತಾನೆ. ಸದರಿ ದಿನ ಹಲ್ಲೆಯಿಂದ ಬಂದ ರಕ್ತವು ನನ್ನ ಸೀರೆಗೆ ಸೋರಿತ್ತು. ಆ ರೀತಿ ಹಲ್ಲೆ ಮಾಡಿದ್ದರು ಎಂದು ಹೇಳಿದ ನಂತರ ನೇರವಾಗಿ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಆ ರೀತಿ ಪೋಲಿಸ ಠಾಣೆಗೆ ಹೋಗಿದ್ದೆ ಎಂದು ಹೇಳುವಾಗ ಸಮಯ ಮದ್ಯಾಹ್ನ 1.00 ಗಂಟೆಯಾಗಿತ್ತು. ಸಾಕ್ಷಿ ಮುಂದುವರೆದು ಆ ರೀತಿ ಪಿರ್ಯಾದು ನೀಡಲು ಹೋದಾಗ ಪೋಲಿಸರು ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಪೋಲಿಸ ಠಾಣೆಗೆ ಹೋಗಿದ್ದಿರಿ ಎಂದು ಹೇಳುವ ನಂತರ ಗಜೇಂದ್ರಗಡಕ್ಕೆ ಹೋಗಿರುತ್ತೀರಲ್ಲವೆ ಎಂದರೆ ಸಾಕ್ಷಿಯು ಆಸ್ಪತ್ರೆಗೆ ಹೋಗಿರುತ್ತೆವೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಆಸ್ಪತ್ರೆಗೆ ಹೋದ ದಿನವೆ ನನ್ನನ್ನು ಬಿಡುಗಡೆ ಮಾಡಿ ಕಳುಹಿಸಿರುತ್ತಾರೆ. ನನಗೆ ಹಲ್ಲೆ ಮಾಡಿದ್ದಾರೆ ಎಂದು ಹೇಳುವ ಸಮಯದಲ್ಲಿ ಸುಮಾರು 4 ರಿಂದ 5 ಜನರು ಸೇರಿದ್ದರು. ನಾನು ಸ್ವತಃ ಆರೋಪಿಯೊಂದಿಗೆ ಸರಿಯಾದ ವೈವಾಹಿಕ ಜೀವನವನ್ನು ನಡೆಸದೆ ಆರೋಪಿಗೆ ಸುಮ್ಮನೆ ಕಿರುಕುಳ ನೀಡಿ ಪ್ರಸ್ತುತ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ ಆರೋಪಿಯು

ಹಲ್ಲೆ ಮಾಡಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ದಿನ ಹಲ್ಲೆಯಿಂದ ರಕ್ತ ಸಿಕ್ತವಾಗಿತ್ತು ಎಂದು ಹೇಳುವ ನನ್ನ ಸೀರೆಯನ್ನು ಪೋಲಿಸರು ಪಡೆದುಕೊಂಡಿರುವುದಿಲ್ಲ. ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/ 1.08.2022

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ